# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: | 111 (102) |
| ಸದಸ್ಯರ ಹೆಸರು | :: | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | :: | 14.02.2024 |
| ಉತ್ತರಿಸುವ ಸಚಿವರು | :: | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆ, ಕುರುಗೋಡು ತಾಲ್ಲೂಕಿನ ಮಲ್ಲಪ್ಪನ ಕೆರೆಯ 246 ಎಕರೆ ಪ್ರದೇಶದಲ್ಲಿ 200 ಕ್ಕೂ ಹೆಚ್ಚು ದಲಿತ ರೈತರು 1928 ರಿಂದಲೂ ಉಳಿಮೆ ಮಾಡಿಕೊಂಡು ಬಂದಿದ್ದು, ಕೆಲ ವರ್ಷಗಳ ಹಿಂದೆ ಸರ್ಕಾರವು ಆ ಜಮೀನಿನ ಪಹಣಿಯಲ್ಲಿ ಪದನಾಮವಾಗಿ ಮಲ್ಲಪ್ಪನ ಕೆರೆ ಎಂದು ದಾಖಲು ಮಾಡಿರುವ ಕಾರಣ ದಶಕಗಳಿಂದ ಉಳಿಮೆ ಮಾಡಿಕೊಂಡು ಬಂದಿರುವ ರೈತರಿಗೆ ಜಮೀನು ಕೈತಪ್ಪುವಂತಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; | ಬಳ್ಳಾರಿ ಜಿಲ್ಲೆ, ಕುರುಗೋಡು ತಾಲ್ಲೂಕಿನ ಮಲ್ಲಪ್ಪನ ಕೆರೆಯ 246 ಎಕರೆ ಪ್ರದೇಶವು ದಿನಾಂಕ:22.08.1924ರ ಡಯಾಗ್ಲಾಟ್‌ನ ರಿ-ಸೆಟಲ್‌ಮೆಂಟ್ ರಿಜಿಸ್ಟರ್ ಕಲಂ 13ರಲ್ಲಿ ಆರ್ ಡಿ/ನಂ/7062/8ಎ27/48, ದಿನಾಂಕ: 19.04.1948ರ ಪ್ರಕಾರ ಮಲ್ಲಪ್ಪನ ಕೆರೆ ಉದ್ದೇಶಕ್ಕಾಗಿ ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆ ಎಂದು ನಮೂದನೆ ಇರುತ್ತದೆ. 1965-66 ರಿಂದ 1999-2000ರ ಕೈ ಬರಹದ ಪಹಣಿಯ ಕಾಲಂ 9 ರಲ್ಲಿ ಕರ್ನಾಟಕ ಸರ್ಕಾರ ಕಾಲಂ 10 ರಲ್ಲಿ ಮಲ್ಲಪ್ಪನಕೆರೆ ಎಂದು ನಮೂದಾಗಿರುತ್ತದೆ.<br><br>ಪ್ರಸ್ತಾಪಿತ ಜಮೀನಿನಲ್ಲಿ ಅನಾಧಿ ಕಾಲದಿಂದಲೂ ರೈತರು ಉಳಿಮೆ ಮಾಡುತ್ತಾ ಬಂದಿರುತ್ತಾರೆ ಮತ್ತು ಭೂ ಕಂದಾಯ ಕಾಯ್ದೆ ಅಡಿ ನಮೂನೆ-57 ಅರ್ಜಿಗಳನ್ನು ಸಲ್ಲಿಸಿರುತ್ತಾರೆ.<br><br>ಸರ್ಕಾರಿ ಕೆರೆ, ಕಟ್ಟೆ, ಕುಂಟೆ ಮುಂತಾದ ಜಲಕಾಯ ಪ್ರದೇಶಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| ಆ) | ಮಲ್ಲಪ್ಪನ ಕೆರೆ ಅನ್ನೋ ಹೆಸರಿನ ಕಾರಣಕ್ಕೆ ಸ್ವಾತಂತ್ರ್ಯ ಪೂರ್ವದಿಂದಲೂ ಉಳುಮೆ ಮಾಡಿಕೊಂಡು ಬಂದಿರುವ ರೈತರಿಗೆ ಈ ಜಮೀನಿನಲ್ಲಿ ಮಲ್ಲಪ್ಪನ ಕೆರೆ ಇತ್ತು ಅದನ್ನು ಒತ್ತುವರಿ ಮಾಡಿಕೊಂಡು ಉಳುಮೆ ಮಾಡುತ್ತಿರುವುದಾಗಿ ಅಧಿಕಾರಿಗಳು ಹೇಳುತ್ತಿರುವುದರಿಂದ ರೈತರು ಸಂಕಷ್ಟಕ್ಕೆ ಒಳಗಾಗಿದ್ದು ರೈತರನ್ನು ಒಕ್ಕಲೆಬ್ಬಿಸಿದಂತೆ ಆಗುವುದಿಲ್ಲವೇ; ಹಾಗೂ ಅಧಿಕಾರಿಗಳು ಮಾಡಿದ ತಪ್ಪಿಗೆ ರೈತರಿಗೆ ಶಿಕ್ಷೆ ಕೊಟ್ಟಂತೆ ಆಗುವುದಿಲ್ಲವೇ; | 1924 ರ ದಾಖಲೆ ಪ್ರಕಾರ ಪ್ರಸ್ತಾಪಿತ ಜಮೀನನ್ನು ಕೆರೆಗೆ ಭೂ ಸ್ವಾಧೀನ ಕಾಯ್ದೆ ರ ಅಡಿ ಭೂ ಸ್ವಾಧೀನ ಮಾಡಿಕೊಂಡಿರುವುದರಿಂದ, ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ ಮಂಜೂರು ಮಾಡಿ ಪಟ್ಟಾ ನೀಡಲು ಅವಕಾಶಗಳು ಇರುವುದಿಲ್ಲ. ಆದ್ದರಿಂದ ಇದರಲ್ಲಿ ಅಧಿಕಾರಿಗಳ ಪಾತ್ರವು ಇರುವುದಿಲ್ಲ. |

| | | |
|---|---|---|
| ಇ) | ಈ ಜಮೀನಿಗೆ ಸಂಬಂಧಿಸಿದಂತೆ ಕೆಲವರಿಗೆ ಪಟ್ಟಾ ನೀಡಿದ್ದು, ಉಳಿದ 200 ಕ್ಕೂ ಹೆಚ್ಚು ದಲಿತ ಕುಟುಂಬಗಳಿಗೂ ಕಂದಾಯ ಭೂಮಿ ಎಂದು ನಮೂದು ಮಾಡಿ ಪಟ್ಟಾ/ಸಾಗುವಳಿ ಪತ್ರ ನೀಡಬೇಕೆಂದು ರೈತರು ದಶಕಗಳಿಂದ ಹೋರಾಟ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೈತರಿಗೆ ನ್ಯಾಯ ದೊರಕಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು) | ಮಲ್ಲಪ್ಪನಕೆರೆ ಜಮೀನಿನಲ್ಲಿ 19 ಫಲಾನುಭವಿಗಳಿಗೆ ವಿಸ್ತೀರ್ಣ 46.19 ಎಕರೆ ಜಮೀನಿಗೆ 1981-82 ನೇ ಸಾಲಿನಲ್ಲಿ ದಿನಾಂಕ:03-06-1981 ರಂದು ಪಟ್ಟಾ ನೀಡಲಾಗಿರುತ್ತದೆ.<br><br>ವಿಸ್ತೀರ್ಣ 21.21 ಎಕರೆ ಕುಡಿಯುವ ನೀರಿನ ಕೆರೆ ಉದ್ದೇಶಕ್ಕೆ ಸ.ನಂ 297 ಪೈಕಿ ವಿಸ್ತೀರ್ಣ 0.04, 299/ಎ ವಿಸ್ತೀರ್ಣ 4.78, 299/ಬಿ ರಲ್ಲಿ ವಿಸ್ತೀರ್ಣ 4.12, 304/ಎ ವಿಸ್ತೀರ್ಣ 5.49, 304/ಬಿ ವಿಸ್ತೀರ್ಣ 3.13 ಮತ್ತು ಸ.ನಂ 305 ವಿಸ್ತೀರ್ಣ 1.98 ಒಟ್ಟು ವಿಸ್ತೀರ್ಣ 21.21 ಎಕರೆ ಜಮೀನು ಕೆರೆ ಉದ್ದೇಶಕ್ಕೆ ಬಳಕೆ ಮಾಡಲಾಗಿರುತ್ತದೆ (ಪಹಣಿಯಲ್ಲಿ ಕೆರೆ ಪರಂಬೋಕು ಎಂದು ನಮೂದಾಗಿರುತ್ತದೆ) ಇನ್ನೂ ಉಳಿದ ಜಮೀನು ಕೆರೆಯ ಲಕ್ಷಣಗಳನ್ನು ಕಳೆದುಕೊಂಡಿರುತ್ತದೆ.<br><br>ಈ ಸಂಬಂಧ ಮಲ್ಲಪ್ಪನ ಕೆರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರು ನಮೂನೆ-57 ಅರ್ಜಿ ಸಲ್ಲಿಸಿತ್ತಾರೆ. ಸರ್ಕಾರಿ ಕೆರೆ, ಕಟ್ಟೆ, ಕುಂಟೆ ಮುಂತಾದ ಜಲಕಾಯ ಪ್ರದೇಶಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಆರ್‌ಡಿ 12 ಎಲ್‌ಜಿಇ 2024**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು